ಒ ಎಸ್ 315/2023 ಪಿ.ಡಬ್ಲ್ಯೂ:1

ಇಂದು ದಿಃ 04.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಬಿ ವಕೀಲರಿಂದಃ

ನಾನು ಪದವೀಧರೆ. ವಾದ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಮದುವೆಯು ದಿನಾಂಕ 26.01.2014ರಂದು ಆಗಿರುತ್ತದೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಆರ್ ಟಿ ಸಿ ಮತ್ತು ಅಸೆಸ್ ಮೆಂಟ್ ದಾಖಲೆಗಳನ್ನು ಕೊಟ್ಟಿದ್ದೇನೆ, ಉಳಿಕೆ ದಾಖಲೆಗಳನ್ನು ಕೊಟ್ಟಿಲ್ಲ. ದಾವಾ 1 ರಿಂದ 3ನೇ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರು ಸ್ವಂತ ಸಂಪಾದನೆಯಿಂದ ಅವರ ತಂದೆ ಹೆಸರಿನಲ್ಲಿ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ದಿನಾಂಕ 17.12.2021ರಂದು ನನ್ನ ತಂದೆ ಮೃತಪಟ್ಟಿರುತ್ತಾರೆ. ಆಗ ಅವರಿಗೆ 67 ವರ್ಷ ಪ್ರಾಯವಾಗಿತ್ತು. ನನ್ನ ತಂದೆಗೆ 67 ವರ್ಷವಾಗಿತ್ತು, ಯಾವುದೇ ಸಂಪಾದನೆ ಇರಲಿಲ್ಲ. ಆದರೂ ಸಹ ಪ್ರತಿವಾದಿಗಳು ಅವರ ಸ್ವಂತ ಸಂಪಾದನೆಯಿಂದ ಐಟಂ ನಂಬರ್ 1 ರಿಂದ 3 ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ನಂತರ ಪ್ರತಿವಾದಿಗಳು ಅವರ ನಡುವೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು, ಆ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಿಪಿ 4 ರ ಆಸ್ತಿ ಸಹ ಪಿತ್ರಾರ್ಜಿತ ಆಸ್ತಿಯಲ್ಲ ಎಂದರೆ ಸರಿಯಲ್ಲ. 4ನೇ ಐಟಂ ಆಸ್ತಿಯನ್ನು ಪ್ರತಿವಾದಿಗಳಿಗೆ ಮನೆ ಇಲ್ಲದ ಕಾರಣ ಜನತಾ ನಿವೇಶನದಡಿಯಲ್ಲಿ ಕೊಟ್ಟಿರುವ ನಿವೇಶನ ಎಂದರೆ ಸರಿಯಲ್ಲ. 4 ಮತ್ತು 5ನೇ ಐಟಂ ಆಸ್ತಿಗಳ ವಿವರಗಳನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆಯು ನನ್ನ ತಂದೆ ಮತ್ತು ಪ್ರತಿವಾದಿಗಳು ಅದ್ದೂರಿಯಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಆದರೆ ನನ್ನ ತಂದೆ ಮದುವೆ ಮಾಡಿದ್ದಾರೆ. ನನ್ನ ಮದುವೆಗೆ 15 ಲಕ್ಷ ಖರ್ಚಾಗಿದೆ ಎಂದರೆ ಸರಿಯಲ್ಲ. ಆ ಸಾಲವನ್ನು ಸಹ ಪ್ರತಿವಾದಿಗಳು ತೀರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಕಾಲವಾದ ನಂತರ ನನ್ನ ತಾಯಿಯ ಒಡವೆಗಳನ್ನು ಸಹ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಟಿ ನರಸೀಪುರದ ಬೈರಾಪುರ ಗ್ರಾಮಕ್ಕೆ ಮದುವೆಯಾಗಿರುತ್ತೇನೆ. ನಾವು ಮೈಸೂರಿನಲ್ಲಿ ಮನೆ ಕಟ್ಟಿದಾಗಲೂ ಸಹ ಪ್ರತಿವಾದಿಗಳು ಹಣ ಸಹಾಯ ಮಾಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.